ಅನುಸೂಚಿತ ಆದಿಮ ಜಾತಿಯವರಿಗಾಗಿ ಸಮಗ್ರ ಯೋಜನೆ

೧೧೫೪. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೆ ?

ಅ) ರಾಜ್ಯದ ಗಿರಿಜನರ ಅಭಿವೃದ್ಧಿಗಾಗಿ ಸಮಗ್ರ ಯೋಜನೆಯೊಂದನ್ನು ತಯಾರಿಸಲಾಗಿದೆಯೇ! ತಯಾರಿಸಿದಲ್ಲಿ ಯೋಜನೆ ವರದಿ ಅಂಶಗಳೇನು : (ವಿವರವೊದಗಿಸುವುದು)

ಆ) ಈ ಯೋಜನೆಗಾಗಿ ಅಂದಾಜುಗೊಳಿಸಲಾಗಿರುವ ಹಣವೆಷ್ಟು ;

ಇ) ೧೯೮೬–೮೭ ಹಾಗೂ ೧೯೮೭–೮೮ನೇ ಸಾಲಿಗೆ ಖರ್ಚು ಮಾಡಲಾಗಿರುವ ಹಣವೆಷ್ಟು ; (ಯಾವ ಯಾವ ಬಾಬುಗಳಿಗಾಗಿ ವೆಚ್ಚ ಮಾಡಿರುವ ವಿವರಕೊಡುವುದು)

ಈ) ೧೯೮೮–೮೯ನೇ ಸಾಲಿಗೆ ಯೋಜನೆಗೊಳ್ಳಲಾಗಿರುವ ಕಾರ್ಯಕ್ರಮಗಳೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಗಿರಿಜನರ ಸರ್ವಾಂಗೀಣ ಅಭಿವೃದ್ಧಿಗಾಗಿ ಪಂಚ ವಾರ್ಷಿಕ ಮತ್ತು ವಾರ್ಷಿಕ ಯೋಜನೆಗಳನ್ನು ನಿರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಗಳ ಮುಖ್ಯ ಅಂಶಗಳು ಕೆಳಕಂಡಂತಿರುತ್ತವೆ.

೧. ಬಡತನದ ಬವಣೆಯಿಂದ ಬಳಲುತ್ತಿರುವವರಿಗೆ ಹಲವಾರು ಆರ್ಥಿಕ ಕಾರ್ಯಕ್ರಮಗಳ ಮುಖಾಂತರ ಮೇಲೆ ಬರಲು ಸಹಕರಿಸುವುದು.

೨. ಗಿರಿಜನರ ಕಲೆ, ಸಂಸ್ಕೃತಿಗಳನ್ನು ಸಂರಕ್ಷಿಸುವಲ್ಲಿ ಹಾಗೂ ಗಿರಿಜನರ ಅಭಿವೃದ್ಧಿ ಮಾಡುವಲ್ಲಿ ಸೂಕ್ತ ಕಾರ್ಯ ನೀತಿಯನ್ನು ಅನುಸರಿಸುವುದು.

೩. ಗಿರಿಜನರ ವಸಾಹತುಗಳಿಗೆ ಕನಿಷ್ಟ ಅವಶ್ಯಕ ಮೂಲಭೂತ ಸೌಕರ್ಯವನ್ನು ಒದಗಿಸುವುದು

ಆ) ೧೯೮೭–೮೮

———

ರೂ. ೧೬೫೮೯೯೨ ಲಕ್ಷಗಳು.

ಇ) ೧೯೮೬–೮೭ ೧೯೮೭–೮೮

——— ———

(ರೂ. ಲಕ್ಷಗಳಲ್ಲಿ)

೧೧೯೯.೬೪ ೯೭೨.೭೩ (ಫೆಬ್ರುವರಿ ಮಾಹೆಯ ಅಂತ್ಯದ ವರೆಗೆ)

ವಿವರಗಳನ್ನು ಅನುಬಂಧ ೧ ಮತ್ತು ೨ ರಲ್ಲಿ ಒದಗಿಸಲಾಗಿದೆ.

ಈ) ೧೯೮೮–೮೯ನೇ ಸಾಲಿನ ವಾರ್ಷಿಕ ಯೋಜನೆಯಲ್ಲಿ ಕಾರ್ಯಗತಗೊಳಿಸಲುಗಿರುವ ಕಾರ್ಯಕ್ರಮಗಳನ್ನು ಅನುಬಂಧ ೩ ರಲ್ಲಿ ಕೊಡಲಾಗಿದೆ.

ಅನುಬಂಧ—೧

೧೯೮೬-೮೭ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಲ್ಲಿನ ಪ್ರಗತಿ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಇಲಾಖೆ	ಒದಗಿಸಿದ ಹಣ	ಖರ್ಚಾದ ಹಣ
೧	ಕೃಷಿ	೬೫.೩೦	೬೩.೮೦
೨	ತೋಟಗಾರಿಕೆ	೧೯.೨೦	೧೮.೭೪
೩	ಭೂ ಸಂರಕ್ಷಣೆ	೪೩.೨೦	೪೪.೪೧
೪	ಪಶುಸಂಗೋಪನೆ	೭.೭೨	೭.೭೧
೫	ಮೀನುಗಾರಿಕೆ	೫,೦೦	೩.೯೫
೬	ಅರಣ್ಯ	೩೮.೨೦	೩೭.೬೩
೭	ಎನ್‌ಆರ್‌ಇಪಿ	೧೦೮.೦೦	೧೦೮.೦೦
೮	ಸಹಕಾರ	೫೧.೭೫	೨೯.೯೫
೯	ಸಣ್ಣ ನೀರಾವರಿ	೯.೦೦	೧೧.೫೪
೧೦	ಕೊಳವೆ ನೀರಾವರಿ ಭಾವಿ	೨೩.೮೭	೨೩.೮೭
೧೧	ಗ್ರಾಮೀಣ ವಿದ್ಯುದ್ದೀಕರಣ	೩೨೦.೫೦	೩೦೦.೦೦
೧೨	ಕೈಗಾರಿಕೆ ಮತ್ತು ವಾಣಿಜ್ಯ	೧೬೨.೫೦	೧೬೦.೯೪
೧೩	ರೇಷ್ಮೆ	೨೨.೪೩	೨೨.೪೨
೧೪	ಸಂಪರ್ಕ ಮತ್ತು ರಸ್ತೆ	೩೯.೦೦	೪೦.೬೫
೧೫	ಆರೋಗ್ಯ	೩೩.೦೨	೨೫.೮೪
೧೬	ಕುಡಿಯುವ ನೀರು	೨೩.೩೫	೨೦.೮೪
೧೭	ವಾರ್ತಾ ಮತ್ತು ಪ್ರಚಾರ	೧.೦೦	೧ ೦೦
೧೮	ಗೃಹ	೪೫.೦೦	೪೫.೦೦
೧೯	ಉದ್ಯೋಗ ಮತ್ತು ತರಬೇತಿ	೬.೯೦	೪.೩೦
೨೦	ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮ	೧೧.೧೩	೧೧.೧೩
೨೧	ಸಮಾಜ ಕಲ್ಯಾಣ		
	ಅ) ಆಡಳಿತ	೬.೦೨	೫.೧೧
	ಆ) ಐಟಿಡಿಪಿ ಹೊರಪ್ರದೇಶ	೪೪.೦೩	೪೪.೮೩
	ಇ) ಇತರ ಯೋಜನೆಗಳು	೨೬.೭೭	೨೬.೭೭
	ಈ) ಆದಿವಾಸಿ ಜನಾಂಗ	೩೫.೫೪	೩೫.೫೪
೨೨	ಪೌಷ್ಟಿಕ ಆಹಾರ	೫.೦೦	೨.೬೦
೨೩)	ಡಿಆರ್‌ಡಿಎಸ್	೩.೮೭	೩.೮೭
		೧೧೫೭.೦೮	೧೧೯೯.೬೪

ಅನುಬಂಧ—೨

೧೯೮೭–೮೮ನೇ ಸಾಲಿನ ಗಿರಿಜನ ಉಪಯೋಜನೆಯಲ್ಲಿ ಸಾಧಿಸಿದ ಪ್ರಗತಿ

(ಫೆಬ್ರವರಿ ಅಂತ್ಯದಲ್ಲಿದ್ದಂತೆ)

ಕ್ರಮ ಸಂಖ್ಯೆ	ಇಲಾಖೆ/ ಕಾರ್ಯಕ್ರಮ	ಒದಗಿಸಿದ ಹಣ	ಖರ್ಚು
೧	೨	೩	೪
೧	ಕೃಷಿ	೭೧.೬೮	೪೦.೦೫
೨	ತೋಟಗಾರಿಕೆ	೨೩.೭೭	೯.೭೯
೩	ಭೂಸಂರಕ್ಷಣೆ	೫೦.೦೦	೨೨.೯೭
೪	ಪಶುಸಂಗೋಪನೆ	೪೫.೦೬	೩೨.೭೦
೫	ಅರಣ್ಯ	೬೨.೮೧	೫೫.೫೮
೬	ಸಣ್ಣ ನೀರಾವರಿ	೨೦೦.೦೦	೯೦.೬೧
೭	ಮೀನುಗಾರಿಕೆ	೫.೦೦	೩ ೦೦
೮	ಕೈಗಾರಿಕೆ ಮತ್ತು ವಾಣಿಜ್ಯ	೪೫.೮೦	೨೧.೩೪
೯	ಕುಡಿಯುವ ನೀರು	೨೬.೫೦	೯.೬೧
೧೦	ಸಂಪರ್ಕ ಮತ್ತು ರಸ್ತೆ	೪೩ ೧೨	೧೨.೮೬
೧೧	ವಯಸ್ಕರ ಶಿಕ್ಷಣ	೧೮.೪೦	೨.೬೫
೧೨	ಗೃಹ	೪೫.೦೦	೪೩ ೦೦
೧೩	ವಾರ್ತಾ ಮತ್ತು ಪ್ರಚಾರ	೧.೪೫	೦.೭೦
೧೪	ಶಿಕ್ಷಣ	೩೭.೪೦	೧.೫೯
೧೫	ರೇಷ್ಮೆ	೪.೮೦	೫.೭೨
೧೬	ಆರೋಗ್ಯ	೬೬.೪೭	೪೨.೮೮
೧೭	ಉದ್ಯೋಗ ಮತ್ತು ತರಬೇತಿ	೯.೫೦	೩ ೪೫
೧೮	ಪೌಷ್ಟಿಕ ಆಹಾರ	೬೦.೭೦	೧.೧೧
೧೯	ಸಹಕಾರ	೪೭.೨೦	೧೪.೫೬
೨೦	ಗ್ರಾಮೀಣ ವಿದ್ಯುದ್ದೀಕರಣ	೩೫೦.೦೦	೨೮೮.೪೬
೨೧	ಐಆರ್‌ಡಿಪಿ	೧೮೫.೦೦	೪೭.೬೦
೨೨	ಎನ್‌ಆರ್‌ಇಪಿ	೧೦೫.೫೦	೧೧೫.೦೩
೨೩	ಆರ್‌ಎಲ್‌ಇಜಿಪಿ	೨.೦೦	೨.೦೦
೨೪	ಆಹಾರ ಧಾನ್ಯಗಳ ವಿತರಣೆ	೧೬೦.೬೦	೭೪.೯೫
೨೫	ಆದಿವಾಸಿ ಜನಾಂಗ	೫.೫೬	೩.೩೬
೨೬	ನೀರಾವರಿ ಕೊಳವೆ ಬಾವಿಗಳು	೫.೮೮	೫.೫೮
೨೭	ಐಟಿಡಿಪಿ ಹೊರಪ್ರದೇಶ	೧೫.೫೭	೮.೭೩
೨೮	ಸಮಾಜ ಕಲ್ಯಾಣ	೨.೮೫	೨.೮೫
	ಒಟ್ಟು	೧೬೩೮.೯೨	೯೭೨.೬೩

ಅನುಬಂಧ – ೩

೧೯೮೮–೮೯ನೇ ಸಾಲಿನಲ್ಲಿ ಗಿರಿಜನರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ.

	ಇಲಾಖೆ	ಕಾರ್ಯಕ್ರಮಗಳು
೧	ಕೃಷಿ	ಉಳುಮೆ ಎತ್ತು ಮತ್ತು ಎತ್ತಿನಗಾಡಿಗಳು, ಕೃಷಿ ಉಪಕರಣಗಳು, ಗೊಬ್ಬರ, ಬೀಜ ಇತ್ಯಾದಿ
೨	ತೋಟಗಾರಿಕೆ	ತೋಟಗಾರಿಕೆಯಲ್ಲಿ ತರಬೇತಿ, ಹಿಂದಿನ ಸಾಲಿನಲ್ಲಿ ಬೆಳೆಸಿದ ಮಾದರಿ ಹೆಣ್ಣಿನ ತೋಟಗಳ ಪಾಲನ ಹೊಸ ಅರ್ಧ ಎಕರೆ ತೆಂಗು ಅಥವಾ ಹಣ್ಣಿನ ತೋಟಗಳ ಅಭಿವೃದ್ಧಿ
೩	ಭೂ ಸಂರಕ್ಷಣೆ	ಬದುಗಳ ನಿರ್ಮಾಣ, ನೀರಿನ ಕುಂಡಗಳನ್ನು ತೆರೆಯುವುದು, ಒಣ ಭೂಮಿ ಅಭಿವೃದ್ಧಿ ಯೋಜನೆ ಇತ್ಯಾದಿ
೪	ಪಶುಸಂಗೋಪನೆ	ಕರೆಯುವ ಹಸುಗಳ ಹಾಗೂ ಎಮ್ಮೆಗಳನ್ನು ಒದಗಿಸುವುದು ಮತ್ತು ಹಂದಿ ಸಾಕಾಣಿಕೆ ಘಟಕ ತೆರೆಯುವುದು.
೫	ಮೀನುಗಾರಿಕೆ	ಮೀನು ಹಿಡಿಯುವಲ್ಲಿ ತರಬೇತಿ ಹಾಗೂ ತರಬೇತಿ ನಂತರ ಮೀನು ಹಿಡಿಯುವ ಸಲಕರಣೆಗಳನ್ನು ಒದಗಿಸುವುದು
೬	ಅರಣ್ಯ	ಮನೆಗಳನ್ನು ಕಟ್ಟಿಸುವುದು, ಗಿರಿಜನರಿಗೆ ಬಿದಿರು–ಬೊಂಬುಗಳ ಸರಬರಾಜು, ಕುಟೀರ ಕೈಗಾರಿಕೆ ಸ್ಥಾಪಿಸುವುದು, ಸಾಮಾಜಿಕ ಭದ್ರತಾ ನಡು ತೋಪುಗಳ ಅಭಿವೃದ್ಧಿ ಮರದ ದಿಮ್ಮಿಗಳ ಕಾರ್ಯದಲ್ಲಿ ತರಬೇತಿ, ಕಾಲೋನಿಗಳಿಗೆ ಕುಡಿಯುವ ನೀರು ಸರಬರಾಜು ಇತ್ಯಾದಿ
೭	ಐಟಿಡಿಪಿ	ಕಾರ್ಯಕ್ರಮಗಳು
೮	ಎನ್‌ಆರ್‌ಇಪಿಆರ್‌ಇಜಿಎಸ್ ಆರ್‌ಎಲ್‌ಇಜಿಪಿ	ನಿರುದ್ಯೋಗಿ ಗಿರಿಜನರಿಗೆ ಉದ್ಯೋಗಾವಕಾಶ
೯	ಸಹಕಾರ	ಲ್ಯಾಂಪ್ ಸಂಘಗಳಲ್ಲಿ ಗಿರಿಜನರನ್ನು ಸದಸ್ಯರನ್ನಾಗಿ ಸುವುದು, ದಿನಬಳಕೆ ಆವಶ್ಯಕ ವಸ್ತುಗಳನ್ನು ಸರಬರಾಜು ಮಾಡುವುದು, ಸೊಸೈಟಿ ಡಿಪೋಗಳನ್ನು ತೆರೆಯುವುದು, ಇತ್ಯಾದಿ
೧೦	ಸಣ್ಣ ನೀರಾವರಿ	ಏತ ನೀರಾವರಿ ಯೋಜನೆಗಳು, ಹೊಸಕೆರೆಗಳ ನಿರ್ಮಾಣ ಹಾಗೂ ದುರಸ್ತಿ ಇತ್ಯಾದಿ
೧೧	ಗ್ರಾಮೀಣ ವಿದ್ಯುದ್ದೀಕರಣ	ಗಿರಿಜನ ಕಾಲೋನಿಗಳ ವಿದ್ಯುದ್ದೀಕರಣ

೧	೨	೩
೧೨	ಕೈಗಾರಿಕೆ ಮತ್ತು ವಾಣಿಜ್ಯ	ಜೇನು ಸಾಕಾಣಿಕೆ, ಮಂರಗೆಲಸದಲ್ಲಿ ತರಬೇತಿ ತರಬೇತಿ ಹಾಗೂ ಉತ್ಪಾದನಾ ಘಟಕಗಳಿ, ಸಾಮೂಹಿಕ ಕಾರ್ಯಗಾರಕ್ಕೆ ಬಿದಿರು ಮತ್ತು ಬೊಂಬು ಕೇಂದ್ರಗಳಿಗೆ ಸಹಾಯ, ಇತ್ಯಾದಿ.
೧೩	ರೇಷ್ಮೆ	ಹಿಪ್ಪುನೇರಳೆ ತೋಟಗಳ ಅಭಿವೃದ್ಧಿ
೧೪	ಸಂಪರ್ಕ ಮತ್ತು ಕಟ್ಟಡ	ಕೂಡು ರಸ್ತೆಗಳ ನಿರ್ಮಾಣ
೧೫	ಆರೋಗ್ಯ	ಪ್ರಾಥಮಿಕ ಆರೋಗ್ಯ ಕೇಂದ್ರ ಸಂಚಾರಿ ಆರೋಗ್ಯ ಘಟಕಗಳ ತೆರೆಯುವಿಕೆ ದಾದಿಯರ ಉಪಕೇಂದ್ರಗಳು
೧೬	ಕುಡಿಯುವ ನೀರಿನ ಸರಬರಾಜು	ಕೊಳವೆ ಬಾವಿ ಹಾಗೂ ತೆರೆದ ಬಾವಿಗಳ ತೆರೆಯುವಿಕೆ
೧೭	ಗೃಹ	ಹೊಸಮನೆಗಳ ನಿರ್ಮಾಣ
೧೮	ವಾರ್ತಾ ಮತ್ತು ಪ್ರಚಾರ	ಪ್ರಮಾಸ ಕಾರ್ಯಕ್ರಮಗಳನ್ನು ನಡೆಸುವುದು
೧೯	ಶಿಕ್ಷಣ	ಶಾಲಾ ಮಕ್ಕಳಿಗೆ ಉಚಿತ ವಸ್ತ್ರಗಳು ಹಾಗೂ ಪಠ್ಯ ಪುಸ್ತಕಗಳ ಸರಬರಾಜು, ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು
೨೦	ಉದ್ಯೋಗ ಮತ್ತು ತರಬೇತಿ	ಹೊಲಿಗೆ ತರಬೇತಿ ಕೇಂದ್ರಗಳು ಹಾಗೂ ಮಂರಗೆಲಸ ತರಬೇತಿ ಕೇಂದ್ರಗಳು
೨೧	ಪೌಷ್ಟಿಕ ಆಹಾರ	ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ, ಗಿರಿಜನ ಕಾಲೋನಿಗಳಲ್ಲಿ ಕಡಿಮೆ ದರದಲ್ಲಿ ಆಹಾರ ಸಾಮಗ್ರಿ ಸರಬರಾಜು ಗರ್ಭಿಣಿ ಸ್ತ್ರೀಯರಿಗೆ ವಿಶೇಷ ಪೌಷ್ಟಿಕ ಆಹಾರ ಸರಬರಾಜು.
೨೨	ಸಮಾಜ ಕಲ್ಯಾಣ	ಜೇನು ಕುರುಬ, ಕೊರಗ, ಆದಿವಾಸಿ ಜನಾಂಗದವರಿಗೆ ವಿಶೇಷ ಕಾರ್ಯಕ್ರಮಗಳು, ನೀರಾವರಿ ಕೊಳವೆ ಬಾವಿಗಳು ಇತ್ಯಾದಿ

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಕೊಟ್ಟಿಲ್ಲವೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಏತಕ್ಕೆಂದರೆ ಇಡೀ ರಾಜ್ಯದಲ್ಲಿರುವ ಗಿರಿಜನರ ಅಭಿವೃದ್ಧಿಗಾಗಿ ಏನೇನು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂದು ಕೇಳಿದ ಸಂದರ್ಭದಲ್ಲಿ ಗಿರಿಜನರ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡಿದ್ದೇವೆಂದು ಒಂದು ಪಟ್ಟಿಯನ್ನೇ ಕೊಟ್ಟಿದ್ದಾರೆ. ಆ ಪಟ್ಟಿಯ ಪ್ರಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂದು ನೋಡಿದರೆ ಬಸುಶಃ ಗಿರಿಜನರನ್ನು ಒಂದುನೂರಂ ವರ್ಷವಾದರೂ ಉದ್ಧಾರ ಮಾಡುವುದಕ್ಕೆ ಸಾಧ್ಯವಾಗಲಾರದು. ಆದ್ದರಿಂದ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ ಇಡೀ ರಾಜ್ಯದಲ್ಲಿ ಗಿರಿಜನರ ಅಭಿವೃದ್ಧಿಗೋಸ್ಕರವಾಗಿ ಅವರ ಕುಟುಂಬಿಗಳಲ್ಲಿ ಏನು ಅವಶ್ಯಕತೆ ಇದೆಯೋ ಅದನ್ನು ಪತ್ತೆ ಮಾಡಿ, ಆ ಪ್ರಕಾರವಾಗಿ ಸೌಲಭ್ಯಗಳನ್ನು ಕೊಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಒಳ್ಳೆಯದೆಂದು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ತಾವು ಈಗಾಗಲೇ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಉದ್ದೇಶಪಟ್ಟಿದ್ದೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಗಿರಿಜನರು ಅದರಲ್ಲೂ ಗುಡ್ಡಗಾಡಿನಲ್ಲಿ ವಾಸ ಮಾಡತಕ್ಕಂಥ ಜನರ ಆರ್ಥಿಕ ಪರಿಸ್ಥಿತಿ ಬಹಳ ಹೀನಾಯ ಸ್ಥಿತಿಯಲ್ಲಿರುತ್ತದೆ. ಇಂಥ ಹೀನಾಯ ಸ್ಥಿತಿಯಲ್ಲಿರುವ ಜನರನ್ನು ಯೋಜನಾಬದ್ಧವಾಗಿ ಬಡತನದ ರೇಖೆಯಿಂದ ಮೇಲೆ ಎತ್ತಬೇಕು. ಅವರಿಗೆ

ಕನಿಷ್ಟ ಅವಶ್ಯಕತೆಗಳನ್ನಾದರೂ ಒದಗಿಸಿಕೊಡಬೇಕು ಎನ್ನುವ ರೀತಿಯಲ್ಲಿ ಒನೇ ಪಂಚವಾರ್ಷಿಕ ಯೋಜನೆ, ಒನೇ ಪಂಚವಾರ್ಷಿಕ ಯೋಜನೆ ಮತ್ತು ವಾರ್ಷಿಕ ಯೋಜನೆಗಳಲ್ಲಿ ಕ್ರಮಬದ್ಧವಾಗಿ ವಿಷಯಗಳನ್ನು ವಿಾಸಲಾಗಿಟ್ಟು ಕೆಲಸ ಮಾಡುತ್ತಿದ್ದೇವೆ. ಕನಿಷ್ಟ ಅವಶ್ಯಕತೆಗಳು ಅವರುಗಳಿಗೆ ಮುಖ್ಯವಾಗಿ ಮನೆಗಳನ್ನು ಕಟ್ಟಿಸಿಕೊಡುವುದು, ಹೊಟ್ಟೆಗೆ ಅನ್ನ, ಉಡಲು ಬಟ್ಟೆ ಇವುಗಳನ್ನು ಒದಗಿಸುವ ಬಗ್ಗೆ ಗಿರಿಜನ ಕುಟುಂಬಗಳವರಿಗೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದೇವೆ ೧೦ ಪರ್ಸೆಂಟ್ ಕುಟುಂಬಗಳವರಿಗೆ ಎಲ್ಲರಿಗೂ ಯೋಗ್ಯವಾದ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆ. ಅವರನ್ನು ಒಡತನದ ರೇಖೆಯಿಂದ ಮೇಲಕ್ಕೆ ಎತ್ತುವ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎನ್ನುವುದನ್ನು ವಿವರವಾಗಿ ವಿವರಿಸಿದ್ದೇನೆ. ಮತ್ತೆ ಅದನ್ನೇ ಹೇಳಬೇಕಾಗಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಚಾಮರಾಜನಗರ ಮತ್ತು ಹೆಗಡದೇವನಕೋಟೆಯ ಕಡೆಗೆ ಹೋಗಲಿಕ್ಕೆ ಸಾಧ್ಯವಾಗಿಲ್ಲ. ಈ ವರ್ಷದಲ್ಲಿ ಆ ಕಡೆ ಬರುತ್ತೇನೆ ಸರ್ಕಾರದವರು ಗಿರಿಜನರ ಉದ್ಧಾರಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ, ಶೈಕ್ಷಣಿಕ ಕಾರ್ಯಕ್ರಮ ಇವೇ ಮುಂತಾದ ಒಳ್ಳೆಯ ಕೆಲಸಗಳನ್ನು ಮಾಡಿದೆ. ಆಶ್ರಮ ಶಾಲೆಗಳನ್ನೂ ಕೂಡ ತೆಗೆದಿದೆ ಎಂದು ತಿಳಿಸುತ್ತೇನೆ.

ಶ್ರೀ ಎಂ. ಶಿವಣ್ಣ —ಮಾನ್ಯ ಅಧ್ಯಕ್ಷರೇ, ೧೯೮೮-೮೯ನೇ ಸಾಲಿಗೆ ಅವರು ಹಾಕಿಕೊಂಡಿರುವ ಕಾರ್ಯಕ್ರಮಗಳಲ್ಲಿ ಕೃಷಿ ಉತ್ಪಾದನೆಗೆ ಅತ್ಯಂತ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಕೃಷಿ ಉತ್ಪಾದನೆಯ ಕಾರ್ಯಕ್ರಮದಲ್ಲಿ ಬಹುಶಃ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತೀರಿ ಅದರಲ್ಲಿ ಗಿರಿಜನರಿಗೆ ಜಮೀನನ್ನು ಹಂಚಿರುತ್ತೀರಿ. ಆದರೆ ಮೂಲಭೂತವಾಗಿ ಜಮೀನು ಇಲ್ಲದಿರತಕ್ಕಂಥ ಸಂದರ್ಭದಲ್ಲಿ ಅವರಿಗೆ ಜಮೀನು ಕೊಡುವುದಷ್ಟೇ ಅಲ್ಲ, ಅವರಿಗೆ ಎತ್ತು ಮತ್ತು ಎತ್ತಿನ ಗಾಡಿಯನ್ನೂ ಕೊಡಬೇಕು ಜೊತೆಗೆ ವ್ಯವಸಾಯದ ಉಪಕರಣಗಳನ್ನೂ ಕೂಡ ಕೊಡಬೇಕು. ಈಗ ಸರ್ಕಾರದವರು ಕೊಡುತ್ತಿರುವ ಈ ಎಲ್ಲ ಸೌಲಭ್ಯಗಳು ನೇರವಾಗಿ ಗಿರಿಜನರಿಗೆ ತಲಪುವಂತಿರಬೇಕು. ಆದರೆ ಇದೆಲ್ಲ ಬಿಡಿತವಾಗಿಯೂ ಗಿರಿಜನರ ಮನೆಗೆ ತಲುಪುತ್ತಿಲ್ಲ. ನಾನು ಹೇಳುವಂತಾದ್ದೇನೆಂದರೆ, ಗಿರಿಜನರು ಎಲ್ಲೆಲ್ಲಿ ವಾಸವಾಗಿರುತ್ತಾರೋ ಅವರಿಗೆ ಮುಖ್ಯವಾಗಿ ಸರ್ಕಾರದವರು ಕೊಡತಕ್ಕಂಥ ಒಂದು ಎಕರೆ ಎರಡು ಎಕರೆ ಜಮೀನನ್ನು ಮತ್ತು ವ್ಯವಸಾಯ ಮಾಡಲು ಮೂಲಭೂತವಾಗಿ ಅವಶ್ಯಕ ವ್ಯವಸಾಯ ಸಾಮಾಗ್ರಿಗಳನ್ನು ಒದಗಿಸಬೇಕು. ನಮ್ಮ ಮೈಸೂರು ಜಿಲ್ಲೆಯಲ್ಲಿರತಕ್ಕಂಥ ಗಿರಿಜನರ ಪೈಕಿ ಅನೇಕರಿಗೆ ಜಮೀನು ಇಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳು ಬಾರಿ ಎಚ್ಚರಿಕೆಯನ್ನು ವಹಿಸಿ ಬೇಡಲು ಜಮೀನನ್ನು ಕೊಡಬೇಕೆಂದು ವ್ಯವಸ್ಥೆ ಮಾಡಿದ್ದರು. ಆದರೆ ಜಮೀನನ್ನು ಕೊಡುವುದಕ್ಕೆ ಆಗುತ್ತಿಲ್ಲ, ಏತಕ್ಕೆಂದರೆ ಅರಣ್ಯ ಸಮಸ್ಯೆ ಬರುತ್ತದೆ. ಆದ್ದರಿಂದ ಇವೆಲ್ಲ ಸಮಸ್ಯೆಗಳನ್ನು ಪರಿಹರಿಸಿ ಮೂಲಭೂತವಾಗಿ ಗಿರಿಜನರಿಗೆ ಜಮೀನು ಹಂಚುವ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಸೂಕ್ತವಾಗಿರುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಮೈಸೂರು ಜಿಲ್ಲೆಯಲ್ಲಿ ನಾನು ನೋಡಿದ ಹಾಗೆ ನಿವೃತ್ತ ಅಧಿಕಾರಿ ಶ್ರೀ ನಂಜುಂಡರಾವ್ ಎಂಬುವವರನ್ನು ನೇಮಿಸಿ ಅವರ ಮೂಲಕ ಮೈಸೂರು ಜಿಲ್ಲೆಯಲ್ಲಿರತಕ್ಕ ಗಿರಿಜನರ ಅವಶ್ಯಕತೆಗಳು ಏನಿವೆ, ಅವರ ಕುಟುಂಬಗಳಿಗೆ ಏನೇನು ಬೇಕೆಂಬುದನ್ನು ಪಟ್ಟಿ ಮಾಡಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಇದನ್ನು ರಾಜ್ಯದಲ್ಲೆಲ್ಲ ಅನುಸರಿಸಿದರೆ ಅನುಕೂಲವಾಗುತ್ತದೆಂದು ಹೇಳುತ್ತಾ ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ ಬಸವಣ್ಣಪ್ಪ.—ಒಟ್ಟು ೨೩ ಇಲಾಖೆಗಳ ಮತಿಯಿಂದ ಈ ಕಾರ್ಯಕ್ರಮ ಜಾರಿಯಲ್ಲಿದೆ. ಕೃಷಿ ತೋಟಗಾರಿಕೆ, ಸಣ್ಣ ನೀರಾವರಿ, ಮೀನುಗಾರಿಕೆ ಇತ್ಯಾದಿ, ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ಮೇಲೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯದರ್ಶಿಗಳು ಕೆಲವೊಂದು ಕಾರ್ಯಕ್ರಮಗಳನ್ನು ಹಾಕಿದರೂ ಟೈಬಲ್ ವೆಲ್‌ಫೇರ್‌ಗೆ ಅನುಕೂಲವಾಗಿಲ್ಲ. ಸಣ್ಣ ನೀರಾವರಿ ಮಾಡುವುದಕ್ಕೆ ಅನುಕೂಲ ಇಲ್ಲ. ಇದನ್ನು ಡೈವರ್ಟ್ ಮಾಡಿ ಅವರ ಅವಶ್ಯಕತೆಗನುಗುಣವಾಗಿ ಮಾಡುವುದಕ್ಕೆ ಅನುಮತಿ ಕೊಡಬೇಕೆಂದು ಕೇಳಿದಾಗ ನಾವು ಅನುಮತಿ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಮೈಸೂರಿನಲ್ಲಿ ವಿಶೇಷ ಅಧಿಕಾರಿಯನ್ನು ನೇಮಕ ಮಾಡಿದ್ದೇವೆಂದು ಹೇಳಿದರು ಅಷ್ಟೇ ಅಲ್ಲ, ರಾಜ್ಯ ಮಟ್ಟದಲ್ಲಿ ಜಂಟಿ ನಿರ್ದೇಶಕರ ಸ್ಥಾನವನ್ನು ಹೋದ ವರ್ಷ ಕ್ರಿಯೇಟ್ ಮಾಡಿ ಟ್ರೈಬಲ್ ವೆಲ್‌ಫೇರ್‌ಗೆ ಹೆಚ್ಚಿನ ಆಕ್ಕಿ ಕೊಡುವುದಕ್ಕೆ ಮಾನ್ಯ ಸಿದ್ದೇಗೌಡರನ್ನು ನೇಮಕ ಮಾಡಿದ್ದೇವೆ. ಅವರು ಅವರ ಪುಗತಿಯ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಶಿವಣ್ಣನವರು ಈ ಜನರು ಜೀವನ ನಡೆಸಬೇಕಾದರೆ

ಅವರಿಗೆ ಒಂದೆರಡು ಎಕರೆ ಜಮೀನು ಏನು ಇದೆ ಅದನ್ನು ಅವರ ಹೆಸರಿಗೆ ಮಾಡತಕ್ಕದ್ದು ಅವಶ್ಯಕ ಮತ್ತು ಇನ್ನಿತರ ಸೌಲಭ್ಯಗಳನ್ನು ಒದಗಿಸುವುದು ಅವಶ್ಯಕ ಎಂದು ಹೇಳಿದರು. ಅವರು ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಅರಣ್ಯ ಜಮೀನನ್ನು ಕೊಡಬೇಕಾದರೆ ಬಹಳ ಸಮಸ್ಯೆ ಇದೆ, ಇದರಿಂದ ಅವರಿಗೆ ಹಕ್ಕುಪತ್ರ ಕೊಡತಕ್ಕ ಅವಕಾಶ ಆಗಿಲ್ಲ. ಆದರೆ ಅವರಿಗೆ ಎಲ್ಲಾ ವಿಧವಾದ ರಕ್ಷಣೆಯೂ ಇದೆ. ಅವರಿಗೆ ಎವಿಕ್ಷನ್, ಹೆರಾಸ್‌ಮೆಂಟ್ ಆಗದಂತೆ ನೋಡಿಕೊಳ್ಳಬೇಕೆಂದು ಅರಣ್ಯ ಇಲಾಖೆಯವರಿಗೆ ಹೇಳಿದ್ದೇವೆ. ಫಾರೆಸ್ಟ್ ಲ್ಯಾಂಡ್ ಆದರೆ ಅದಕ್ಕೆ ಕೇಂದ್ರ ಸರ್ಕಾರದವರು ಅನುಮತಿ ಕೊಡಬೇಕು. ಅವರ ಅನುಮತಿಗೂ ಬರೆದಿದ್ದೇವೆ. ಟ್ರೈಬಲ್ ಪೀಪಲ್ ಏನು ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ಎಲ್ಲಾ ವಿಧವಾದ ಸಾಕರ್ಯವನ್ನು ಮಾಡಿಕೊಟ್ಟಿದ್ದೇವೆ ಮತ್ತು ರಕ್ಷಣೆಯನ್ನು ನೀಡಿದ್ದೇವೆ. ಆದರೆ ಅವರಿಗೆ ಜಮೀನನ್ನು ಹೊಂದುವ ಹಕ್ಕು ಮಾತ್ರ ದೊರೆತಿಲ್ಲ. ಅದೇ ಈಗ ಇರತಕ್ಕ ಸಮಸ್ಯೆ. ಮಾನ್ಯ ಸದಸ್ಯರಿಗೆ ಈ ಸಭೆಯ ಮೂಲಕ ಭರವಸೆ ಕೊಡುತ್ತೇನೆ, ಹೆಗಡದೇವನಕೋಟೆಗೆ ಹೋದ ಸಾರಿ ಹೋಗಲಿಕ್ಕೆ ಆಗಲಿಲ್ಲ, ಈ ಸಾರಿ ಸಧ್ಯದಲ್ಲೇ ಪ್ರವಾಸ ಮಾಡಿ ಅವರ ಸಮಸ್ಯೆಯನ್ನು ಅರಿತು ಅದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ,

ಶ್ರೀ ಬಿ. ಬಸವಲಿಂಗಪ್ಪ.—ಇದು ಹೆಗಡೆದೇವನಕೋಟೆಗೆ ಸಂಬಂಧಪಟ್ಟಿದ್ದಾದರೂ ಸಹ ಇದು ಇಡೀ ರಾಜ್ಯಕ್ಕೆ ಅನ್ವಯವಾಗುವುದರಿಂದ ನಾನು ಒಂದು ಪ್ರಶ್ನೆ ಕೇಳಬಯಸುತ್ತೇನೆ. ಮಂತ್ರಿಗಳು ಈ ಜರ ಸಮಸ್ಯೆ ಬಗ್ಗೆ ಹೇಳಿದರು. ಅವರಿಗೆ ಜಮೀನು ಕೊಡುವುದರ ಸಮಸ್ಯೆ, ಕೆಲಸ ಮಾಡುವುದರ ಸಮಸ್ಯೆ, ಪುನರ್ವಸತಿ ಕಲ್ಪಿಸುವುದರ ಸಮಸ್ಯೆ, ಆದರೆ ಕಾಫಿ ಪ್ಲಾಂಟರ್ಸ್‌ಗಾದರೆ ೫೦-೬೦ ಎಕರೆ ಜಮೀನು ಕೊಡುವುದಕ್ಕೆ ಯಾವ ಸಮಸ್ಯೆಯೂ ಇಲ್ಲ. ಹೆಗಡದೇವನಕೋಟೆ, ಹುಣಸೂರಿನಲ್ಲಿ ಕಾಡುಕುರುಬರು ಏನಿದ್ದಾರೆ ಅವರ ಸ್ಥಿತಿಯನ್ನು ಆಲ್ಲಿ ಹೋಗಿ ನೋಡಬೇಕು. ತಪ್ಪಿಗೆ ಹೇಳಬೇಕೆಂದರೆ, ಹುಣಸೂರಿನಲ್ಲಿ ಹೆಣ್ಣು ಮಕ್ಕಳು, ಗಂಡುಮಕ್ಕಳು ಎಲ್ಲ ಬೆತ್ತಲೆಯೇ ಇರುತ್ತಾರೆ. ನಾಮಕಾವಸ್ತೆಗೆ ಸಣ್ಣ ಸಣ್ಣ ಬಟ್ಟೆಗಳನ್ನು ಕಟ್ಟಿಕೊಂಡಿರುತ್ತಾರೆ. ಅವರು ಈ ದೇಶದ ಪ್ರಜೆಗಳಲ್ಲವೇ ನಾಗರೀಕರಲ್ಲವೇ? ಅವರ ಬಗ್ಗೆ ನಿಮಗೆ ಕನಿಕರ ಬರುವುದಿಲ್ಲವೇ? ಶ್ರೀ ಬೊಮ್ಮಾಯಿಯವರು ಇಲ್ಲೇ ಕುಳಿತಿದ್ದಾರೆ, ಅವರು ಈ ಬಗ್ಗೆ ಗಮನ ಹರಿಸಬೇಕೆಂದು ಹೇಳುತ್ತೇನೆ. ಅವರ ರೀಹ್ಯಾಬಿಲಿಟೇಷನ್‌ಗೋಸ್ಕರ ನೀವು ಅರಣ್ಯ ಇಲಾಖೆಯಿಂದ ಜಮೀನು ಕೊಡಬೇಕು. ಒಟ್ಟಿನಲ್ಲಿ ಇಬ್ಬರು ಮಂತ್ರಿಗಳು ಸೇರಿ ಅಸಕ್ತಿ ವಹಿಸಿ ಕೆಲಸ ಮಾಡಿದರೆ ಈ ಜನರ ರೀಹ್ಯಾಬಿಲಿಟೇಟ್ ಆಗುತ್ತದೆ. ಅಲ್ಲಿ ಸುಮಾರು ೨೦ ಸಾವಿರ ಜನರು ಇರಬಹುದು. ಅವರಿಗೆ ಜಮೀನನು ಕೊಟ್ಟರೆ ಏನಾಗುತ್ತದೆ? ಅವರಿಗೆ ಪುನರ್ವಸತಿ ಕಲ್ಪಿಸಿಕೊಡಿ. ಕೇಂದ್ರ ಸರ್ಕಾರದವರು ಹಣ ಕೊಡುತ್ತಿದ್ದಾರೆ, ಅದನ್ನು ಖರ್ಚು ಮಾಡಿ ಪುನರ್ವಸತಿ ಕಲ್ಪಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಜಿ. ಬಸವಣ್ಣಪ್ಪ.—ಅದು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಾಗ ಎಂದು ಈಗಾಗಲೇ ಹೇಳಿದೆ. ಅದನ್ನು ಅವರಿಗೆ ಕೊಡುವುದಕ್ಕೆ ಕಾನೂನಿನ ತೊಂದರೆ ಇದೆ. ಅವರಿಗೆ ಎಲ್ಲಾ ವಿಧವಾದ ರಕ್ಷಣೆ ಕೊಟ್ಟಿದ್ದೇವೆ. ಪ್ರವೃತ್ತಿಪರ ತರಬೇತಿ, ಸಣ್ಣ ಸಣ್ಣ ಕಾಟೇಜ್ ಇಂಡಸ್ಟ್ರಿ, ಗೃಹ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಉತ್ತೇಜನ ಕೊಟ್ಟಿದ್ದೇವೆ. ನಾನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾದ ಮೇಲೆ ಅವರ ಶೈಕ್ಷಣಿಕ ಪ್ರಗತಿ ಆಗದಿದ್ದರೆ ಕಷ್ಟವಾಗುತ್ತದೆಂದು ವಿಶೇಷವಾಗಿ ಹಣವನ್ನು ಒದಗಿಸಿ ಆಶ್ರಮ ಶಾಲೆಗಳನ್ನು ತೆರೆದು ೪ನೇ ತರಗತಿವರೆಗೆ ಇದ್ದುದನ್ನು ೭ನೇ ತರಗತಿಯವರೆಗೆ, ೭ನೇ ತರಗತಿವರೆಗೆ ಇದ್ದುದನ್ನು ೧೦ನೇ ತರಗತಿಯವರೆಗೆ ವಿಸ್ತರಿಸಿ ಅವುಗಳಿಗೆ ಬೇಕಾದ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದುವರಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಜಿ.ಎಂ. ಕಾನಡೆ —ಹುಡ್ಕೋ ಮತ್ತು ಜನತಾ ಮನೆಗಳನ್ನು ಹರಿಜನರಿಗೆ ಕೊಡುತ್ತೇವೆಂದು ಹೇಳಿದ್ದೀರಲ್ಲ, ಅದಕ್ಕೆ ಇನ್‌ಕಂ ಲಿಮಿಟ್ ಎಷ್ಟು ಸಾವಿರ ರೂಪಾಯಿಗಳವರೆಗೆ ಇರಬೇಕು? ಫಾರೆಸ್ಟ್ ಜಮೀನು ಮತ್ತೊಂದನ್ನು ಸಾಗುವಳಿ ಮಾಡುತ್ತಿರುವವರಿಗೆ ರಕ್ಷಣೆ ಕೊಟ್ಟಿದ್ದೇವೆಂದು ಹೇಳಿದಿರಲ್ಲ, ಎಷ್ಟು ಜನ ಹರಿಜನರು ಆ ರೀತಿ ಮಾಡಿದ್ದಾರೆ ಮತ್ತು ಎಷ್ಟು ಜನರಿಗೆ ರಕ್ಷಣೆ ಕೊಟ್ಟಿದ್ದೀರಿ ಈ ಕರ್ನಾಟಕ ರಾಜ್ಯದಲ್ಲಿ?

ಶ್ರೀ ಜಿ. ಬಸವಣ್ಣಪ್ಪ.— ೫,೬೦೦ ರೂಪಾಯಿ ಒಳಗೆ ವರಮಾನ ಇರುವವರಿಗೆ ನಾವು ಜನತಾ ಮನೆಗಳನ್ನು ಕೊಡುತ್ತಿದ್ದೇವೆ. ಈಗ ಲಕ್ಷಾಂತರ ಎಕರೆ ಬಗರ್ ಹುಕ್ಕುಮ್ ಸಾಗುವಳಿ ಏನು

ವಗಾಡುತ್ತಿದ್ದಾರೆ ಅದನ್ನು ಮತ್ತು ಗೋಮಾಳ ಜಮೀನನ್ನು ಮೈನರ್ ಫಾರೆಸ್ಟ್ ಎಂದು ಮಾಡಲಾಗಿದೆ. ಅದು ಲಕ್ಷಾಂತರ ಎಕರೆ ಇದೆ. That figure I do not have. If the hon'ble Member desires, I will furnish. ಮತ್ತೆ ಬಗರ್ ಹುಕುಮ್ ಸಾಗುವಳಿ ಏನು ಸಿ.ಎಂಡ್ ಡಿ. ಲ್ಯಾಂಡ್‌ನಲ್ಲಿ ಹಾಗೂ ಇತರ ಜಾಗದಲ್ಲಿ ಮಾಡುತ್ತಿದ್ದರು ಅದರಲ್ಲಿ ೧೯೭೮ಕ್ಕಿಂತ ಮೊದಲಂ ಏನು ಸಾಗುವಳಿ ಮಾಡುತ್ತಿದ್ದವರು, ಅವರಿಗೆಲ್ಲಾ ನಾವು ಪ್ರೊಟಕ್ಷನ್ ಕೊಟ್ಟಿದ್ದೇವೆ. We have given protection to them from eviction and harassment.

ಉದ್ಯೋಗ ವಿನಿಮಯ ಕೇಂದ್ರ

೧೧೨೧ ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿಯಾದವರ ಉದ್ಯೋಗಾರ್ಥಿಗಳ ಸಂಖ್ಯೆ ಎಷ್ಟು? ಹಾಗೂ ನೋಂದಾಯಿಸಿದ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿದೆ? (ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ವಿವರ ಪ್ರತ್ಯೇಕವಾಗಿ ನೀಡುವುದು)

ಆ) ಧಾರವಾಡ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಈವರೆವಿಗೆ ನೋಂದಣಿಯಾದವರ ಸಂಖ್ಯೆ ಎಷ್ಟು ಹಾಗೂ ನೋಂದಾಯಿಸಿದ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿದೆ? (ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ವಿವರ ಪ್ರತ್ಯೇಕವಾಗಿ ಒದಗಿಸುವುದು).

ಇ) ಉದ್ಯೋಗ ದೊರಕಿಸಿಕೊಂಡವರು ತಮ್ಮ ಹೆಸರುಗಳ ನೋಂದಣಿಯನ್ನು ವಜಾ ಮಾಡಿಸಿಕೊಳ್ಳದೆ ಇರುವುದು ಹಾಗೂ ಇದರಿಂದ ಇತರ ಉದ್ಯೋಗಾರ್ಥಿಗಳಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಅನಾನುಕೂಲ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಸ್.ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ದಿನಾಂಕ ೩೧-೧೨-೧೯೮೭ ರಂದು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಒಟ್ಟು ೧೦,೦೬,೨೫೮ ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದು ಇವರುಗಳ ಪೈಕಿ ೮,೧೭,೯೮೦ ಪುರುಷರು ಮತ್ತು ೧,೮೯,೨೬೮ ಮಹಿಳಾ ಉದ್ಯೋಗಾರ್ಥಿಗಳಾಗಿರುತ್ತಾರೆ.

೧೯೮೭ನೇ ಸಾಲಿನಲ್ಲಿ ೭,೭೭೧ ಪುರುಷರು ಮತ್ತು ೧,೦೬೦ ಮಹಿಳೆಯರು ಸೇರಿದಂತೆ ಒಟ್ಟು ೮,೮೨೧ ಅಭ್ಯರ್ಥಿಗಳಿಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಉದ್ಯೋಗಾವಕಾಶ ದೊರಕಿಸಿಕೊಡಲಾಗಿದೆ.

ಆ) ದಿನಾಂಕ ೩೧-೧೨-೧೯೮೭ ರಂದು ಧಾರವಾಡ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ೫೫,೭೬೫ ಪುರುಷರು ಮತ್ತು ೮,೮೬೧ ಮಹಿಳೆಯರು ಸೇರಿ ಒಟ್ಟು ೬೪,೭೨೬ ಅಭ್ಯರ್ಥಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ನೋಂದಾಯಿಸಿಕೊಂಡಿದ್ದ ಅಭ್ಯರ್ಥಿಗಳ ಪೈಕಿ ೧೯೮೭ನೇ ಸಾಲಿನಲ್ಲಿ ಒಟ್ಟು ೫೭೭ ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಿಕೊಡಲಾಗಿದೆ. ಉದ್ಯೋಗ ಪಡೆದವರ ಪೈಕಿ ೫೦೯ ಪುರುಷರು ಮತ್ತು ೬೮ ಮಹಿಳೆಯರು ಆಗಿರುತ್ತಾರೆ.

ಇ) ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತೆ.

ಈ) ಉದ್ಯೋಗ ದೊರಕಿಸಿಕೊಂಡವರು ತಮ್ಮ ಹೆಸರುಗಳ ನೋಂದಣಿಯನ್ನು ವಜಾ ಮಾಡಿಸಿಕೊಳ್ಳದೆ ಇರುವುದರಿಂದ ಇತರ ಉದ್ಯೋಗಾರ್ಥಿಗಳಿಗೆ ಆಗುವ ಅನಾನುಕೂಲಗಳನ್ನು ನಿವಾರಿಸುವ ಸಲುವಾಗಿ ಈ ಕೆಳಕಂಡ ಕ್ರಮ ತೆಗೆದುಕೊಳ್ಳಲಾಗಿದೆ.—

೧) ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿತ ಅಭ್ಯರ್ಥಿಗಳಿಗೆ ನೀಡುವ ನೋಂದಣಿ ಗುರುತಿನ ಚೀಟಿಯಲ್ಲಿ ಅಭ್ಯರ್ಥಿಗಳು ಉದ್ಯೋಗ ಪಡೆದ ನಂತರ "ತಮಗೆ ಉದ್ಯೋಗ ವಿನಿಮಯ ಕಚೇರಿ ಮುಖಾಂತರ ಸ್ವ ಪ್ರಯತ್ನದಿಂದ ಕೆಲಸ ದೊರಕಿದ್ದು, ಇನ್ನು ಮುಂದೆ ಉದ್ಯೋಗ ಪಡೆಯುವಲ್ಲಿ ನೆರವು ಬೇಕಾಗಿಲ್ಲ" ಎಂದು ತಿಳಿಸಲು ಸೂಚಿಸಲಾಗಿದೆ.